A-330 (1)

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಇವರು ನಿಯಮ ೩೩೦ರಡಿ ಸಲ್ಲಿಸಿರುವ ಸೂಚನಾ ಪತ್ರಕ್ಕೆ ಸರ್ಕಾರದ ಉತ್ತರ**

**ವಿಷಯ:**

ಕಳೆದ ೨೦ ವರ್ಷಗಳಿಂದ ಶ್ರೀ ಎನ್. ಎ. ಮುತ್ತಣ್ಣ ಪೋಲೀಸ್ ಮಕ್ಕಳ ವಸತಿ ಶಾಲೆ, ಧಾರವಾಡ ಇಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ಫೆಬ್ರವರಿ ೨೦೨೦ರಿಂದ ವೇತನ ಇರುವುದಿಲ್ಲ. ಅವರಲ್ಲಿ ಓರ್ವ ಶಿಕ್ಷಕರ ೩ ಜನ ಹೆಣ್ಣು ಮಕ್ಕಳು ಬುದ್ಧಿಮಾಧ್ಯರಾಗಿದ್ದು, ಅವರ ಆಸ್ಪತ್ರೆ ಖರ್ಚಿಗೆ ಹಣ ಇಲ್ಲದೆ ತೊಂದರೆ ಪಡುತ್ತಿದ್ದಾರೆ. ವೇತನ ಇಲ್ಲದೇ ಅವರ ಜೀವನ ನಡೆಸುವುದು ಕಷ್ಟವಾಗಿದೆ. ಆದ್ದರಿಂದ ಪೋಲೀಸ್ ಮಕ್ಕಳ ವಸತಿ ಶಾಲೆಯ ದಾಖಲಾತಿ ಕಡಿಮೆಯಾಗಲು ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವ ಕುರಿತು ಬೆಳಗಾವಿ ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ ರಚಿಸಲಾದ ಸಮಿತಿ ಪ್ರಗತಿ ಏನೂ ಆಗಿರುವುದಿಲ್ಲ. ಆದ್ದರಿಂದ ಈ ಶಾಲೆಯ ಅಭಿವೃದ್ಧಿಗಾಗಿ ಮತ್ತು ಶಿಕ್ಷಕರ ವೇತನಕ್ಕಾಗಿ ಕೂಡಲೇ ಕ್ರಮ ಜರುಗಿಸುವ ಕುರಿತು.

**: ಉತ್ತರ :**

ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ ಪೋಲೀಸ್ ಮಕ್ಕಳ ವಸತಿ ಶಾಲೆಯು ದಿನಾಂಕ:೦೫/೦೬/೧೯೯೭ರಲ್ಲಿ ಸ್ಥಾಪನೆಯಾಗಿದ್ದು, ಪೋಲೀಸ್ ಇಲಾಖೆ ನೌಕರರು / ಅಧಿಕಾರಿಗಳ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ನೀಡುವ ಸಲುವಾಗಿ ಈ ವಸತಿ ಶಾಲೆಯನ್ನು ಪ್ರಾರಂಭಿಸಲಾಗಿದೆ.

ಶ್ರೀ ಎನ್. ಎ. ಮುತ್ತಣ್ಣ ಸ್ಮಾರಕ ಪೋಲೀಸ್ ಮಕ್ಕಳ ವಸತಿ ಶಾಲೆಯಲ್ಲಿ ಪೋಲೀಸ್ ಮಕ್ಕಳಿಗೆ ವಸತಿ ಸಹಿತ ಉಚಿತ ವಿದ್ಯಾಭ್ಯಾಸ ನೀಡುತ್ತಿದ್ದು, ಸದರಿ ಶಾಲೆಯನ್ನು ಪೋಲೀಸ್ ಸಿಬ್ಬಂದಿಗಳ ಮಕ್ಕಳ ಹಿತದೃಷ್ಟಿಯಿಂದ ಮುಂದುವರೆಸಲು ಹಾಗೂ ೨೦೨೦-೨೧ನೇ ಸಾಲಿನಲ್ಲಿ ಪ್ರವೇಶಾತಿ ದಾಖಲಾತಿಗಳನ್ನು ಕೈಗೊಳ್ಳಲು ಅನುಮತಿ ನೀಡಲಾಗಿರುತ್ತದೆ.

ಶ್ರೀ ಎನ್. ಎ. ಮುತ್ತಣ್ಣ ಸ್ಮಾರಕ ಪೋಲೀಸ್ ಮಕ್ಕಳ ವಸತಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷರಿಗೆ ವೇತನ ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎನ್. ಎ. ಮುತ್ತಣ್ಣ ಸ್ಮಾರಕ ಪೋಲೀಸ್ ಮಕ್ಕಳ ವಸತಿ ಶಾಲೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಇವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿದ್ದು, ಸದರಿ ಸಂಸ್ಥೆಗೆ ಸಂಬಂಧಿಸಿದ ದಾಖಲೆಗಳನ್ನು / ಕಡತಗಳನ್ನು ಆರಕ್ಷಕ ಅಧೀಕ್ಷಕರು, ಧಾರವಾಡ ಇವರಿಂದ ಪಡೆದು ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸಲಾಗುವುದು ಎಂದು ತಿಳಿಸಿರುತ್ತಾರೆ. ಪ್ರಸ್ತುತ ತನಿಖೆ ಪ್ರಗತಿಯಲ್ಲಿರುತ್ತದೆ.

HD/65/PPA/2020-PS_B

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು